ಶ್ರೀ ಕೆ.ಹೆಚ್. ಪಾಟೀಲ್ : ಇರಬಹುದು, ನಾನು ಒಪ್ಪುತ್ತೇನೆ. ನೀವು ಹೇಳುವ ಮಾತಿನೊಳಗೆ ನನಗಿಂತ ಸಹಕಾರ ಚಳವಳಿಯಲ್ಲಿ ಹೆಚ್ಚಿನ ಆಸ್ಥೆ ನಿಮಗಿದೆ ಎಂದು ಒಪ್ಪುತ್ತೇನೆ. ಅದಕ್ಕಾಗಿ ನಾನು ನಿಮ್ಮ ಮಾತನ್ನು ತೆಗೆದುಹಾಕೋಲ್ಲ. ಸೆಕ್ರೆಟರಿ ಇದ್ದರೂ ಇರಬಹುದು ಇಲ್ಲದೆಯೂ ಇರಬಹುದು. ನಾನು ಆ ಸೆಕ್ರೆಟರೀನ ತಿರುಗ ನೇಮಿಸಲಿಕ್ಕೆ ಹೋಗಲಿಲ್ಲ, ಯಾವುದೂ ಮಾಡಲಿಲ್ಲ. ಇವರನ್ನು ಯಾಕೆ ನಂಬ್ತೀನಿ ಎಂದರೆ ಅಲ್ಲಿದ್ದ ಅನೇಕ ಮೂಟೆಗಳು ಇದ್ದುದು ಇಲ್ಲ ಅಥವಾ ಇಲ್ಲದೇ ಇದ್ದುದು ಸಾಲ ಕೊಟ್ಟಿದ್ದಾರೆ. ಕೆಲವರಿಗೆ ಆಸ್ತಿ ಇಲ್ಲ, ಸಹಕಾರ ಸಂಘ ಉಳಿಸಲಿಕ್ಕೆ ಕೆಲವರನ್ನು ಇಡಬೇಕು ಅಂತ. ಅದು ಕಮಿಟಿ ಅಲ್ಲ. ವಿಕಾಂತಯ್ಯನವರು ಹೇಳಿದಂತೆ, ಕಮಿಟಿ ನೇಮಿಸಬಾರದೆಂದು ಕಾನೂನು ಇದೆ, ಅಡ್ವೈಸರಿ ಕಮಿಟಿ ಅಂತ, ಅದಕ್ಕೆ ಕಾನೂನು ಇಲ್ಲ, ರೂಢಿಯೂ ಇಲ್ಲ. ಅವರಿಗೆ ಅಧಿಕಾರಾನೂ ಇಲ್ಲ. ಅದರ ಬಗ್ಗೆ ಬಹಳಷ್ಟು ತಾವು ಚರ್ಚೆ ಮಾಡಿದಿರಿ. ಇನ್ನು ಅಡಿಟರ್ ವಿಚಾರ ಹೇಳಿದಿರಿ. ನನಗೂ ಸಂದೇಹ ಬಂದಿದೆ ಅವರ ಬಗ್ಗೆ. ನಾನು ಪೊಲೀಸ್ ಅಧಿಕಾರಿಗಳಿಗೂ ಸಹ ಈ ಅಡಿಟರ್‌ಮೇಲೆ ಯೋಗ್ಯ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಲು ಮಾಡಿದ್ದೇವೆ. ಈಗ ಹೊಸ ಕಾನೂನಿನಲ್ಲಿ ಶಿಕ್ಷೆ ಮಾಡಬೇಕೆಂದಾಗ ಮುಚ್ಚಿಹಾಕುವಂಥ ಪ್ರಯತ್ನ ನಡೆದರೆ ಶಿಕ್ಷೆ ಮಾಡಬೇಕಂತ ಮಾಡಿದ್ದೇನೆ. ಈಗ ನಾನು ನೀವೂ ಕೂಡಿ ಮಾಡಲು ಏನು ಮಾಡೋದು ಎಂದರೆ ಶಿಕ್ಷೆ ಮಾಡಿ ಜೈಲಿಗೆ ಹಾಕೋದನ್ನು ಆಮೇಲೆ ನೋಡೋಣ, ಮೊದಲು ಆ ಸೊಸೈಟಿ ಉಳಿಸಬೇಕು. ಚಂದ್ರೇಗೌಡರು ಹೇಳಿದಂತೆ. ಸೊಸೈಟಿ ಮೆಂಬರಲ್ಲಿ ನಾವು ವಿಶ್ವಾಸವನ್ನು ಉಂಟುಮಾಡಬೇಕು. ಅದಕ್ಕೆ ಏನೇನು ಬೇಕೋ ಅದೆಲ್ಲ ಕಾರ್ಯಕ್ರಮಗಳನ್ನು ತ್ವರಿತವಾಗಿ ಮಾಡ್ತೀನಿ, ತಡಮಾಡುವುದಿಲ್ಲ. ಈಗ ಎನ್‌ಕ್ವೆಯರಿ ಇಷ್ಟು ದಿವಸ ತಡವಾಗಿದೆ ಅಂತ ನನ್ನ ಅಭಿಪ್ರಾಯವಿದೆ. ಸೆಕ್ಷನ್ 64ರ ಪ್ರಕಾರ ಎನ್‌ಕ್ವೆಯರಿ ಆಗಲಿ ಅಥವಾ ಸಿ.ಓ.ಡಿ. ಎನ್‌ಕ್ವೆಯರಿಯಾಗಲಿ ಅಥವಾ ನೀವು ಸಜೆಸ್ಟ್‌ಮಾಡುವ ಯಾವುದೇ ಎನ್‌ಕ್ವೆಯರಿಗೂ ನಾನು ತಯಾರಾಗಿದ್ದೇನೆ. ಅದಕ್ಕೂ ಯಾವ ತರಹದ ಅಭ್ಯಂತರವೂ ಇಲ್ಲ.

ಶ್ರೀ ಗುರುಪಾದಪ್ಪ (ನಾಗಮಾರಪಲ್ಲಿ): ಅಡ್ವೈಸರಿ ಕಮಿಟಿ ಮೊದಲು ತೆಗೆಯಬೇಕು.

ಶ್ರೀ ಕೆ.ಹೆಚ್. ಪಾಟೀಲ್ : ಸ್ಪೆಷಲ್ ಆಫೀಸರ್ ನೇತೃತ್ವದಲ್ಲಿ ಒಂದು ವರ್ಷದಲ್ಲಿ ಚುನಾವಣೆ ಆಗಬೇಕಾಗುತ್ತದೆ. ಈಗಾಗಲೇ ನಾಲ್ಕು ತಿಂಗಳಾಗಿಹೋಗಿವೆ. 8 ತಿಂಗಳಲ್ಲಿ ಚುನಾವಣೆ ಆಗಬೇಕು ಅದಕ್ಕೆ ಪೂರ್ವದಲ್ಲಿ ಸ್ವಲ್ಪ ಸೆಟ್‌ರೈಟ್ ಮಾಡಿ ಮಾಡೋಣ, ಇಲ್ಲವೇ ಹೋದರೆ ಮತ್ತೆ ಯಾರು ಬರ್ತಾರೆ, ಇವರೇ ಬರ್ತಾರೋ, ಅವರೂ ಬರ್ತಾರೋ ಗೊತ್ತಿಲ್ಲ. ಅದಕ್ಕೆ ಒಂದು ವರ್ಷದೊಳಗೆ ಚುನಾವಣೆ ಮಾಡಲಿಕ್ಕೆ ನಾನು ಆಸ್ತೆ ವಹಿಸ್ತೀನಿ ಮತ್ತು ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡ್ತೀನಿ. ಮತ್ತು ಅಡಿಟರನ್ನು ಸಸ್ಪೆಂಡ್ ಮಾಡುವ ಬಗ್ಗೆ ಹೇಳಿದಿರಿ. ಅದರ ಬಗ್ಗೆ ಏನಾದರೂ ಎವಿಡೆನ್ಸ್ ದೊರಕಿದರೆ ನಿಜವಾಗಲೂ ಅವನನ್ನು ಸಸ್ಪೆಂಡ್ ಮಾಡ್ತೀನಿ.

3) ಹಿರಿಯೂರು ತಾಲ್ಲೂಕಿನಲ್ಲಿರುವ ಸಕ್ಕರೆ ಕಾರ್ಖಾನೆಯನ್ನು ಪುನಶ್ಚೇತನಗೊಳಿಸದಿರುವುದರಿಂದ ಈ ಕಾರ್ಖಾನೆಯನ್ನು ಖಾಸಗಿಯವರಿಗೆ ವಹಿಸಿಕೊಡುವುದು.

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಅಧ್ಯಕ್ಷರೇ, ಹಿರಿಯೂರು ತಾಲ್ಲೂಕಿನಲ್ಲಿ ಸಕ್ಕರೆ ಕಾರ್ಖಾನೆಯನ್ನು ಪುನಶ್ಚೇತನಗೊಳಿಸದಿರುವುದರಿಂದ ಈ ಕಾರ್ಖಾನೆಯನ್ನು ಖಾಸಗಿಯವರಿಗೆ ವಹಿಸಿಕೊಡುವ ಬಗ್ಗೆ ಸಹಕಾರ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಹಿರಿಯೂರು ತಾಲ್ಲೂಕಿನಲ್ಲಿರುವ ವಾಣಿ ವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆಯು 1984-85ನೇ ಸಾಲಿನಿಂದ ಕಬ್ಬು ಅರೆಯುವಿಕೆಯನ್ನು ಸಂಪೂರ್ಣವಾಗಿ ನಿಲ್ಲಿಸಿದೆ. ಇದಕ್ಕೆ ಮುಖ್ಯ ಕಾರಣ ಇದೆ.

ಕಾರ್ಯಾಚರಣೆಯ ಕ್ಷೇತ್ರದಲ್ಲಿ ಸಾಕಷ್ಟು ಕಬ್ಬು ದೊರೆಯದೇ ಇರುವುದು. ಈ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಪುನರಾರಂಭಿಸುವ ಬಗ್ಗೆ ಸದರಿ ಕಾರ್ಖಾನೆಯ ವಿಶೇಷಾಧಿಕಾರಿಗಳು ಒಂದು ಪ್ರಸ್ತಾವನೆಯನ್ನು ಸಿದ್ಧಪಡಿಸಿದ್ದು ಅದರ ಅನ್ವಯ ಕಬ್ಬು ಬೆಳೆಯಲು ರೈತರಿಗೆ ಒದಗಿಸಬೇಕಾದ ಸೌಲಭ್ಯಗಳು, ಕಾರ್ಖಾನೆಯ ವಿಸ್ತರಣೆ, ಲೇ ಆಫ್ ಪರಿಹಾರ, ರಿಟೇನಿಂಗ್ ಭತ್ಯ, ಪಾವತಿ, ಇತ್ಯಾದಿಗಳ ಖರ್ಚುಗಳ ಸಲುವಾಗಿ ಸರ್ಕಾರದ ವತಿಯಿಂದಾಗಲೀ ಅಥವಾ ಬೇರೆ ಯಾವ ಮೂಲದಿಂದಾಗಲೀ ಸುಮಾರು 300 ಲಕ್ಷ ರೂಪಾಯಿಗಳ ಹಣಕಾಸಿನ ನೆರವು ಅಗತ್ಯಬೀಳುತ್ತದೆ.

ಕಾರ್ಖಾನೆಯನ್ನು ಪುನರಾರಂಭಿಸಲು ಹೊರಗಿನಿಂದ ಕಬ್ಬು ಪಡೆದುಕೊಳ್ಳುವುದು ಇಲ್ಲವೇ ಕಬ್ಬು ಬೆಳೆಗಾರರನ್ನು ಉತ್ತೇಜಿಸಿ ಕಬ್ಬು ಬೆಳೆಯುವ ಕ್ಷೇತ್ರವನ್ನು ಅಭಿವೃದ್ಧಿಗೊಳಿಸುವುದು ಅಗತ್ಯವಿರುತ್ತದೆ. ಕಾರ್ಖಾನೆಯ 100 ಕಿಲೋಮೀಟರ್ ಅಂತರದಲ್ಲಿ ಕಬ್ಬು ದೊರಕುವುದಿಲ್ಲವಾದ್ದರಿಂದ ಹೊರಗಿನಿಂದ ಕಬ್ಬು ಪಡೆಯಲು 100 ಕಿ.ಮೀ. ಒಂದು ಟನ್‌ಗೆ 100.00 ರೂಪಾಯಿಯಂತೆ ಸಾರಿಗೆ ವೆಚ್ಚವನ್ನು ಕಾರ್ಖಾನೆಯು ಭರಿಸಬೇಕಾಗುತ್ತದೆ. ಕಬ್ಬು ಬೆಳೆಯುವ ಕ್ಷೇತ್ರವನ್ನು ಅಭಿವೃದ್ಧಿಪಡಿಸುವ ಬಗ್ಗೆ ಹೇಳುವುದಾದರೆ ಕಾರ್ಖಾನೆಯ ಸದ್ಯದ ಹಣಕಾಸಿನ ಹೊಣೆಗಾರಿಕೆ ಹಾಗೂ ಹಣಕಾಸಿನ ಮೂಲಗರ ಅಭಾವದಿಂದ ಬಾವಿ ನೀರಾವರಿ ಅಸಾಧ್ಯವಾಗಿದ್ದು, ಕಾರ್ಖಾನೆಯು ಮುಖ್ಯವಾಗಿ ವಾಣಿ ವಿಲಾಸ ಜಲಾಶಯವನ್ನು ಅವಲಂಭಿಸಬೇಕಾಗುತ್ತದೆ. ಸದರಿ ಜಲಾಶಯವು ನೀರಾವರಿಗೆ ನೀರನ್ನು ಒದಗಿಸುತ್ತಿರುವುದಿಲ್ಲ.

1988-89ಕ್ಕೆ ಕೊನೆಗೊಂಡಂತೆ ಕಾರ್ಖಾನೆಯು 580 ಲಕ್ಷ ರೂಪಾಯಿಗಳ ಒಟ್ಟು ನಷ್ಟ ಹಾಗೂ 255 ಲಕ್ಷ ರೂಪಾಯಿಗಳ ನಗದು ನಷ್ಟ ಅನುಭವಿಸಿದೆ. ಕಾರ್ಖಾನೆಯ ಮುಖ್ಯ ಹಣಕಾಸು ಹೊಣೆಗಾರಿಕೆ ಸುಮಾರು 259.76 ಲಕ್ಷ ರೂಪಾಯಿಗಳಾಗುತ್ತದೆ.

ಕಾರ್ಖಾನೆಯನ್ನು ಯಾವುದೇ ಕಾರ್ಖಾನೆಯವರಿಗೆ ನೀಡುವ ವಿಚಾರ ಸರ್ಕಾರಕ್ಕೆ ಇರುವುದಿಲ್ಲ. ಇದು ಸಹಕಾರಿ ಚಳುವಳಿಗೆ ವಿರೋಧವಾಗುತ್ತದೆ. ಮೇಲಾಗಿ ಎನ್.ಸಿ.ಡಿ.ಸಿ.ಯವರು ಸಹಕಾರಿ ರಂಗದಲ್ಲಿನ ಸಂಸ್ಥೆಗಳನ್ನು ಖಾಸಗಿಯವರಿಗೆ ನೀಡುವ ಬಗ್ಗೆ ಈಗಾಗಲೇ ಆಕ್ಷೇಪಣೆ ಎತ್ತಿರುತ್ತಾರೆ. ಆದ್ದರಿಂದ ಈ ಸಕ್ಕರೆ ಕಾರ್ಖಾನೆಯನ್ನು ಸಾಕಷ್ಟು ಕಬ್ಬು ದೊರಕುವ ಪ್ರದೇಶಕ್ಕೆ ಸ್ಥಳಾಂತರಿಸುವ ಸಾಧ್ಯಾಸಾಧ್ಯತೆಯನ್ನು ಸರ್ಕಾರ ಪರಿಶೀಲಿಸುತ್ತಿದೆ. ಉಪಾದ್ಯಕ್ಷಣಿಯವರು (ಶ್ರೀಮತಿ ನಾಗಮ್ಮ ಕೇಶವಮೂರ್ತಿ ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

ಇದಲ್ಲದೆ ನಾವು ಕೇನ್ ಡೆವಲಪ್‌ಮೆಂಟ್ ಫಂಡ್‌ನಿಂದ ಹಣವನ್ನು ಪಡೆದು ಅಲ್ಲಿ ಕೇನ್ ಡೆವಲಪ್‌ಮೆಂಟ್ ಮಾಡುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ಸಹಾ ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷಣಿಯವರೇ, ಈಗ ಸನ್ಮಾನ್ಯ ಸಹಕಾರ ಸಚಿವರು ತೊಟ್ಟಿರುವ ಉತ್ತರದಿಂದ ಬಹುಶಃ ವಾಣಿ ವಿಲಾಸ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಗೆ ಬರತಕ್ಕಂಥ ರೈತರಿಗೆ ಸಮಾಧಾನ ತರುವುದಿಲ್ಲ ಎಂದು ನಾನು ತಮ್ಮ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ. ನನ್ನ ಮುಖ್ಯವಾದಂಥ ಪ್ರಶ್ನೆ ಇರುವುದು ಖಾಸಗಿಯವರಿಗೆ ಮಾಡುವುದಿಲ್ಲ. ಆದರೆ ಸ್ಥಳಾಂತರ ಮಾಡುತ್ತೇವೆ ಎಂದು ಹೇಳಿದರೆ ಇವತ್ತು ಷೇರು ಬಂಡಾವಾಳವನ್ನು ಹಾಕಿ ಕೈಗಾರಿಕೆಯನ್ನು ಮಾಡಬೇಕು ಎಂದು ಹೇಳಿ ಅಲ್ಲಿಯವರು ಆಸೆ ಪಟ್ಟು ಇವತ್ತು ಕಬ್ಬನ್ನು ಬೆಳೆಯುವುದಕ್ಕೆ ತಯಾರಾಗಿರತಕ್ಕಂಥ ಜನಗಳ ಪರಿಸ್ಥಿತಿ ಏನು ಎನ್ನತಕ್ಕಂಥದ್ದರ ಬಗ್ಗೆ ಯೋಚನೆಯನ್ನು ಮಾಡಬೇಕು. ದಯಮಾಡಿ ಸ್ಥಳಾಂತರ ಮಾಡಿಸತಕ್ಕಂಥದ್ದನ್ನು ಅದನ್ನು ನಿಲ್ಲಿಸಬೇಕು. ಆ ಯೋಚನೆಯನ್ನು ಕೈಬಿಟ್ಟು ನಾನು ತಮಗೆ ಒಂದು ಸಲಹೆಯನ್ನು ಕೊಡುತ್ತೇನೆ. ತಾವು ಉತ್ತರದಲ್ಲಿ ತಾವು ಹೇಳಿದ್ದೀರಿ, ಇದನ್ನು ಪುನರಾರಂಭ ಮಾಡಬೇಕಾದರೆ ಸುಮಾರು ಮೂರು ಕೋಟಿ ರೂಪಾಯಿಯ ಅಂದಾಜನ್ನು ಇವತ್ತು ಆ ಖರ್ಚನ್ನು ಭರಿಸಬೇಕಾಗುತ್ತದೆ ಎನ್ನತಕ್ಕಂಥದ್ದು. ಮೂರು ಕೋಟಿ ರೂಪಾಯಿಗಳನ್ನು ಇವತ್ತು ಸರ್ಕಾರ ನೀವು

ಕೇನ್ ಡೆವಲಪ್‌ಮೆಂಟ್ ಮುಖೇನವಾಗಲೀ ಅಥವಾ ತಮ್ಮ ಸರ್ಕಾರದ ವತಿಯಿಂದಲಾಗಲೀ, ಯಾವುದೇ ರೀತಿಯಿಂದಲಾಗಲೀ ಮೂರು ಕೋಟಿ ರೂಪಾಯಿಗಳನ್ನು ಸರ್ಕಾರದಿಂದ ರೈತರಿಗೆ ಸಾಲವನ್ನು ಕೊಡತಕ್ಕಂಥದ್ದು ಮತ್ತು ಅವರಿಂದ ಬಂದಂಥ ಕಬ್ಬಿನಿಂದ ಸಾಲವನ್ನು ಮುರಿದುಕೊಳ್ಳತಕ್ಕಂಥದ್ದು. ಈ ರೀತಿಯಾಗಿ ಇವತ್ತು ನೀವು ಕೊಡತಕ್ಕಂಥ ಸಾಲಕ್ಕೆ ಯಾವುದೇ ಧಕ್ಕೆ ಬರುವುದಿಲ್ಲ ಮತ್ತು ಅವರು ವಾಣಿವಿಲಾಸ ಕೆರೆಯನ್ನೇ ಅವಲಂಭಿಸತಕ್ಕಂಥ ಪರಿಸ್ಥಿತಿಯಲ್ಲಿಯೂ ಇಲ್ಲ. ಏಕೆಂದರೆ ಆ ವ್ಯಾಪ್ತಿಯಲ್ಲಿ ಬರತಕ್ಕಂಥ ಸುಮಾರು 21 ಸಾವಿರ ಬೋರ್‌ವೆಲ್‌ಗಳು ಕೂಡಾ ಇವತ್ತು ಕೆಲಸ ಮಾಡುತ್ತಿರತಕ್ಕಂಥ ರೈತರ ಪರಿಸ್ಥಿತಿ ಏನಾಗಿದೆ ಎಂದರೆ ಇವತ್ತು ಮಳೆಯನ್ನೇ ಆಧರಿಸಿ ಬೆಳೆಯನ್ನು ಬೆಳೆಯತಕ್ಕಂಥದ್ದು ಏನು ಇದೆ, ಇದರಿಂದ ಯಾವುದೇ ಪ್ರಯೋಜನವಿಲ್ಲ. ಇವತ್ತು ಕಬ್ಬನ್ನು ಹಾಕಿದ್ದಾರೆ. ಏಕೆಂದರೆ ನನ್ನ ಕ್ಷೇತ್ರ ಕೂಡಾ ಅದೇ ವ್ಯಾಪ್ತಿಯಲ್ಲಿ ಬರತಕ್ಕಂಥದ್ದು. ಪಕ್ಕದ ತಾಲ್ಲೂಕಿನಲ್ಲಿಯೂ ಕೂಡಾ ಹೋಗಿ ವಿಚಾರಿಸಿದಾಗ ಇವತ್ತು ರೈತರುಗಳು ಈಗಾಗಲೇ ಅಲ್ಲಿ ಕಬ್ಬನ್ನು ಬೆಳೆಯುವುದಕ್ಕೆ ತಯಾರಾಗಿದ್ದಾರೆ ಮತ್ತು ಈಗಾಗಲೇ ಎರಡು ಸಾವಿರ ಎಕರೆಯಲ್ಲಿ ಕಬ್ಬನ್ನು ಬೆಳೆದು ಬೆಲ್ಲವನ್ನು ಮಾಡತಕ್ಕಂಥದ್ದನ್ನು ನಾವೇ ಕಣ್ಣಾರೆ ನೋಡಿದ್ದೇವೆ. ಮತ್ತು ಹಿರಿಯೂರು ಕೂಡಾ ಅದರ ವ್ಯಾಪ್ತಿಯಲ್ಲಿ ಬರತಕ್ಕಂಥ ಅಂಡರ್‌ಗ್ರೌಂಡ್ ವಾಟರ್ ಬಹಳಷ್ಟು ಚೆನ್ನಾಗಿದೆ. ಯಾವುದೇ ಕಡೆಯಲ್ಲಿ ಬೋರ್‌ವೆಲ್ಲನ್ನು ಹಾಕಿದರೂ ಆರೆಂಟು ಇಂಚು ನೀರು ಬರತಕ್ಕಂಥ ಮಟ್ಟಕ್ಕೆ ಇದೆ. ಇವತ್ತು ನೀವು ಸರ್ಕಾರದಿಂದ ಸಹಾಯ ಮಾಡಬೇಕಾಗಿರತಕ್ಕಂಥದ್ದು ಇಷ್ಟೆ. ಮೂರು ಕೋಟಿ ರೂಪಾಯಿ ಸಾಲವನ್ನು ಕೊಡಿಸತಕ್ಕಂಥದ್ದು ಒಂದು.

ಎರಡನೆಯದಾಗಿ ಇವತ್ತು ನೀವೇ ಅದನ್ನು ಓಪನ್ ಮಾಡುವುದಕ್ಕೆ ದೊಡ್ಡ ಮನಸ್ಸನ್ನು ಮಾಡಿದರೆ ಇವತ್ತು ನಿಮಗೆ ಬೇಕಾಗಿರತಕ್ಕಂಥದ್ದು ಏಳು ಸಾವಿರ ಎಕರೆಯಲ್ಲಿ ಕಬ್ಬು ಬೇಕಾಗಿರತಕ್ಕಂಥದ್ದು. 21 ಸಾವಿರ ಪಂಪ್‌ಸೆಟ್ಟುಗಳು ಇದೆ. ಇವತ್ತು ನೀವು ನಿಮ್ಮ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಮಾಡಿ ಒಂದು ರೈತರ ಸಲಹಾ ಸಮಿತಿಯನ್ನು ಮಾಡಿ ತಾವೇ ಖುದ್ದಾಗಿ ಬಂದು ಫ್ಯಾಕ್ಟರಿಯಲ್ಲಿ ಕೂತರೆ ಇವತ್ತು ಎಷ್ಟು ಜನ ಕಬ್ಬನ್ನು ಬೆಳೆಯುವುದಕ್ಕೆ ತಯಾರಾಗಿದ್ದಾರೆ ಎನ್ನತಕ್ಕಂಥದ್ದು ಅಂಕಿ ಅಂಶಗಳಿಂದ ಗೊತ್ತಾಗುತ್ತದೆ. ಅದಕ್ಕೋಸ್ಕರವಾಗಿ ನಾನು ಒಂದೇ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ನಾನು ಈ ವಿಷಯದಲ್ಲಿ ಹೆಚ್ಚು ವಾದವನ್ನು ಮಾಡತಕ್ಕಂಥ ಅವಶ್ಯಕತೆ ಇಲ್ಲ. ಕೆ.ಹೆಚ್. ಪಾಟೀಲರು ಸಹಕಾರ ಕ್ಷೇತ್ರದಲ್ಲಿ ತುಂಬಾ ಅನುಭವವಿರತಕ್ಕಂಥವರು. ಇವತ್ತು ನೀವು ಏನಾದರೂ ಇದನ್ನು ಪುನಶ್ಚೇತನಗೊಳಿಸುವುದಕ್ಕೆ ಅವಕಾಶ ಇದ್ದರೆ ಬಹುಶಃ ಇದು ನಿಮ್ಮ ಒಬ್ಬರ ಕೈಯಲ್ಲಿ ಆಗುತ್ತದೆಯೇ ಹೊರತು ಬೇರೆ ಯಾರ ಕೈಯಲ್ಲೂ ಇದು ಆಗುವುದಿಲ್ಲ ಎನ್ನತಕ್ಕಂಥದ್ದನ್ನು ನಾವು ಮನಗಂಡಿದ್ದೇವೆ. ಅದಕ್ಕೋಸ್ಕರ ನಾನು ಕಳಕಳಿಯಿಂದ ತಮ್ಮಲ್ಲಿ ಪ್ರಾರ್ಥನೆಯನ್ನು ಮಾಡುತ್ತಿದ್ದೇನೆ. ತಾವು ಹಿರಿಯೂರಿಗೆ ಬನ್ನಿ. ಇವತ್ತು ನೀವು ಕಾರ್ಖಾನೆಯಲ್ಲಿ ರೈತರನ್ನು ಕರೆಸಿ ಇವತ್ತು ನೋಡಿದರೆ ಇವತ್ತು ಖಂಡಿತವಾಗಿಯೂ ಇದನ್ನು ಪುನಶ್ಚೇತನಗೊಳಿಸುವುದಕ್ಕೆ ಅವಕಾಶವಾಗುತ್ತದೆ. ಮತ್ತು ಆ ಕೀರ್ತಿಯನ್ನು ಕೂಡಾ ತಾವು ಪಡೆಯಬೇಕು ಎನ್ನತಕ್ಕಂಥ ಒಂದು ಮಾತನ್ನು ಹೇಳುತ್ತೇನೆ ಮತ್ತು ಇನ್ನೊಂದು ಆಕ್ಷೇಪಣೆಯನ್ನು ಕೂಡ ನಾನು ಮಾಡುತ್ತೇನೆ. ಸುಮಾರು ಎರಡೂವರೆ ಕೋಟಿ ರೂಪಾಯಿಯಷ್ಟು ಸಾಲ ಇವತ್ತು ಲಾಸ್ ಆಗಿದೆ ಎನ್ನತಕ್ಕಂಥ ಮಾತನ್ನು ಹೇಳುತ್ತಾರೆ. ಅಲ್ಲಿ ಒಂದು ಡಿಸ್ಟಿಲರಿ ಕೂಡಾ ಇದೆ. ಆ ಡಿಸ್ಟಿಲರಿಯಲ್ಲಿ ಲೀಸ್ ಆಗಿರತಕ್ಕಂಥದ್ದು ಸುಮಾರು ಹತ್ತು ವರ್ಷಗಳ ಕಾಲ. ಹತ್ತು ವರ್ಷಗಳು ಲೀಸ್ ಆಗಿದ್ದರೂ ಕೂಡಾ ಲೀಸ್ ಪೀರಿಯಡ್ ಮುಗಿಯುವುದಕ್ಕೆ ಮುಂದೆ ಇನ್ನು ನಾಲ್ಕು ವರ್ಷಗಳು ಇರುವಾಗಲೇ ಅಲ್ಲಿ ಒಂದು ಮ್ಯಾನೇಜ್‌ಮೆಂಟ್‌ನವರು ಬಿ.ಟಿ.ಎಸ್. ಕಂಪನಿಗೂ ಇವರಿಗೂ ಕೂಡಾ ಒಂದು ಅಂಡರ್‌ಸ್ಟ್ಯಾಂಡಿಂಗ್ ಆಗಿ ಲೀಸ್ ಪೀರಿಯಡ್ ನಾಲ್ಕು ವರ್ಷಗಳು ಇರುವಾಗಲೇ ಅದನ್ನು ಇನ್ನು ಹತ್ತು ವರ್ಷ ಮುಂದುವರಿಸತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಇದನ್ನು ನಾನು ನೇರವಾಗಿ ಆರೋಪಮಾಡುವುದಕ್ಕೆ ಇಚ್ಛಿಪಡುತ್ತೇನೆ.

ಇವತ್ತು ಕೋಟ್ಯಾಂತರ ರೂಪಾಯಿಗಳ ಹಸ್ತಾಂತರ ಆಗಿದೆ, ಅವ್ಯವಹಾರ ಇದರಲ್ಲಿ ನಡೆದಿದೆ ಎನ್ನತಕ್ಕಂಥದ್ದು. ಇವತ್ತು ಈ ರೀತಿ ಇದ್ದಾಗ ಅದನ್ನು ತಾವು ವಿಚಾರ ಮಾಡಿ ಇವತ್ತು ಲೀಸ್ ಪೀರಿಯಡ್ ಮುಗಿಯುವುದಕ್ಕೆ ಮುಂಚೆಯೇ ವೆಲ್ ಇನ್ ಅಡ್ವಾನ್ಸ್ ಮಾಡಿರತಕ್ಕಂಥದ್ದನ್ನು ನೀವು ಕ್ಯಾನ್ಸಲ್ ಮಾಡಿ. ಇವತ್ತು ನೀವು ಓಪನ್ ಟೆಂಡರ್ ಇಟ್ಟು ಇವತ್ತು ನೀವು ಡಿಸ್ಟಿಲರಿಯನ್ನೇ ಲೀಸ್ ಕೊಡತಕ್ಕಂಥ ಪ್ರಶ್ನೆ ಮಾಡಿದರೆ ಬಹುಶಃ ಇವತ್ತು ಇನ್ನು ಕೋಟ್ಯಾಂತರ ರೂಪಾಯಿಗಳು ಏನು ಲಾಸ್ ಆಗುತ್ತದೆ, ಆ ಲಾಸ್‌ನ್ನು ತುಂಬುವುದಕ್ಕೆ ಅವಕಾಶವಾಗುತ್ತದೆ ಎನ್ನುವ ಒಂದು ಮಾತನ್ನು ಹೇಳುತ್ತಾ ಇದರ ಬಗ್ಗೆ ವಿಚಾರ ಇದ್ದರೆ ನಮಗೆ ತಿಳಿಸಬೇಕು ಮತ್ತು ಅದನ್ನು ತಾವು ವಿಚಾರ ಮಾಡಬೇಕು ಎಂದು ನಿಮ್ಮ ಮೂಲಕ ನಾನು ಒತ್ತಾಯ ಮಾಡುತ್ತೇನೆ.

ಉಪಾಧ್ಯಕ್ಷಣಿಯವರು : ಇದು ಕಾಲಿಂಗ್ ಅಟೆನೆಷನ್, ನೀವು ಸಿಗ್‌ನೇಟರಿ ಅಲ್ಲ.

ಶ್ರೀ ಹೆಚ್. ಏಕಾಂತಯ್ಯ : ವಿಷಯ ಪರಿಮಿತಿ ಇಟ್ಟುಕೊಂಡಿದ್ದೇನೆ. ಸ್ಥಳಾಂತರಿಸುವ ಸಾಧ್ಯತೆ, ಅಸಾಧ್ಯತೆ ಬಗ್ಗೆ ಪರಿಶೀಲನೆ ಮಾಡುವುದು ಅನಾವಶ್ಯಕ. ಇದನ್ನು ಪರಿಶೀಲನೆ ಮಾಡಬಾರದೆಂದು ನನ್ನ ವಿನಂತಿ. ಈ ಕಾರ್ಖಾನೆಯನ್ನು ಪುನರುಜ್ಜೀವನಗೊಳಿಸುವ ಒಂದು ಯೋಜನೆ ಈಗಾಗಲೇ ತಮ್ಮ ಮುಂದಿದೆ. ಮೂರು ಅಥವಾ ನಾಲ್ಕು ಕೋಟಿ ರೂ.ಗಳನ್ನು ಕೇನ್ ಡೆವಲಪ್‌ಮೆಂಟ್ ಫಂಡ್‌ನಿಂದ ಸಾಲ ಕೊಡಿಸಿ ತಾವು ಈ ಕಬ್ಬನ್ನು ಬೆಳೆಯುವುದಕ್ಕೆ ಪ್ರಯತ್ನ ಮಾಡಬೇಕು. ಹೋದ ಅಧಿವೇಶನದಲ್ಲಿ ಆಯವ್ಯಯ ಚರ್ಚೆಯ ಸಮಯದಲ್ಲಿ ನಾನು ಹೇಳಿದ ಹಾಗೆ ಟಿ.ಟಿ. ಅಂಡ್ ಕಂಪೆನಿಯವರು ಕೋಟಿಗಟ್ಟಲೆ ಹಣವನ್ನು ಮಾಡುವುದಕ್ಕೆ ಬಿಟ್ಟಿದ್ದೀರಿ. ಇವತ್ತು ಡಿಸ್ಟಿಲರೀಸ್‌ಗಳು ಸಹಕಾರಿ ಸಂಘಗಳ ಹೆಸರಿನಲ್ಲಿ ಇರುವುದರಿಂದ, ಅವರು ನಡೆಸಿದರೆ ಅರ್ಧ ಖರ್ಚು ಅಲ್ಲೇ ಬರುತ್ತದೆ. ಆದ್ದರಿಂದ ತಾವು ಯಾವುದೇ ಕಾರಣದಿಂದ ಈ ಕಾರ್ಖಾನೆಯನ್ನು ಸ್ಥಳಾಂತರಿಸುವ ಯೋಚನೆ ಮಾಡದೆ ಇದನ್ನು ಅಲ್ಲೇ ಪ್ರಾರಂಭ ಮಾಡುವುದಕ್ಕೆ ಬೇಕಾದಂಥ ಕ್ರಮವನ್ನು ತಾವು ತೆಗೆದುಕೊಳ್ಳಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಶ್ರೀಯುತರುಗಳಾದ ಜಯಚಂದ್ರರವರು ಹಾಗೂ ಏಕಾಂತಯ್ಯನವರು ಹಿರಿಯೂರಿನಲ್ಲಿರುವ ಈ ಸಕ್ಕರೆ ಕಾರ್ಖಾನೆಯ ಬಗ್ಗೆ ಸ್ವಾರಸ್ಯಕರವಾಗಿ ಹಾಗೂ ಉತ್ಕೃಷ್ಟವಾಗಿ ತಮ್ಮ ಸಲಹೆಗಳನ್ನು ಕೊಟ್ಟಿದ್ದಾರೆ. ಸರ್ಕಾರ ಇದನ್ನು ಪರಿಶೀಲನೆ ಮಾಡುತ್ತದೆಂದ ಮೇಲೆ, ಸರ್ಕಾರ ಅದನ್ನು ತೆಗೆದುಕೊಂಡು ಹೋಗುತ್ತದೆಂದು ತಿಳಿದುಕೊಳ್ಳಬಾರದು. ಒಂದು ಅರ್ಜಿಯನ್ನು ಕೊಟ್ಟಮೇಲೆ ಅದನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಅದನ್ನು ಎರಡನೆಯವರಿಗೆ ಕೊಡುವ ಅಭಿಪ್ರಾಯ ನನ್ನದಲ್ಲ. ಆ ಕಾರ್ಖಾನೆಯನ್ನು ಅಲ್ಲೇ ಮಾಡಬೇಕೆಂದು ನನ್ನ ಅಭಿಪ್ರಾಯವಿದೆ. ಇದಕ್ಕೆ ಕೇನ್ ಡೆವೆಲಪ್‌ಮೆಂಟ್ ಫಂಡ್‌ನಿಂದ ಹಣವನ್ನು ತೆಗೆದುಕೊಂಡು ಅಲ್ಲೇ ಕಬ್ಬನ್ನೂ ಬೆಳೆಸ್ತೋಣ ಎನ್ನುವ ಮಾತನ್ನು ಈಗಾಗಲೇ ಹೇಳಿದ್ದೇನೆ. ಇದನ್ನು ಮಾನ್ಯ ಸದಸ್ಯರಾದ ಜಯಚಂದ್ರರವರು ಕೇಳಿಸಿಕೊಂಡಿಲ್ಲವೆಂದು ಕಾಣುತ್ತದೆ. ಬಹುಶಃ ಇದನ್ನು - ಅವರು ಕೇಳಿದ್ದರೆ ಈ ಉಪ-ಪ್ರಶ್ನೆಯನ್ನು ಕೇಳುವ ಪ್ರಸಂಗ ಇರುತ್ತಿರಲಿಲ್ಲ. ಏನು ಮಾಡಬೇಕೆಂದು ಕೇಳಿದ್ದಾರೆ. ಬೇಕಾದರೆ ಅವರ ಅಧ್ಯಕ್ಷತೆಯಲ್ಲೇ ಒಂದು ಕಮಿಟಿಯನ್ನು ನೇಮಿಸುತ್ತೇನೆ. ಏನು ಮಾಡಬೇಕೆಂದು ಸಲಹೆ ಮಾಡುತ್ತಾರೋ ಮಾಡಲಿ. ಇದನ್ನು ಸಂಪೂರ್ಣವಾಗಿ ಡೆವೆಲಪ್ ಮಾಡಿ ಪುನರ್ ಜೀವ ಮಾಡುವುದು ನನ್ನ ಉದ್ದೇಶ. ಕರ್ನಾಟಕ ರಾಜ್ಯದಲ್ಲಿ ಸಹಕಾರಿ ರಂಗದಲ್ಲಿ ಎಷ್ಟು ಇಂಡಸ್ಟ್ರೀಸ್‌ಗಳು ಬಂದ ಆಗಿವೆಯೋ ಅವುಗಳನ್ನೆಲ್ಲಾ ಒಂದಲ್ಲ ಒಂದು ದಿನ ತೆರೆಯಬೇಕೆಂಬುದೇ ನನ್ನ ಧ್ಯೇಯ. ಇದಕ್ಕೆ ತಮ್ಮೆಲ್ಲರ ಸಹಕಾರ ಬೇಕಾಗುತ್ತದೆ.

ಶ್ರೀ ಬಿ.ಟಿ. ಜಯಚಂದ್ರ : ಮಾನ್ಯ ಉಪಾಧ್ಯಕ್ಷಿಣಿಯರೆ, ನನ್ನ ಒಂದು ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ. ನಮ್ಮ ಜಿಲ್ಲೆಗೆ ಸಂಬಂಧಪಟ್ಟಿರುವಂಥ ಪ್ರಶ್ನೆ ಇದು. ಬಿ.ಟಿ. ಅಂಡ್ ಕಂಪೆನಿಯವರಿಗೆ ಲೀಸನ್ನು ಎಕ್ಸ್‌ಟೆಂಡ್ ಮಾಡುವುದರ ಬಗ್ಗೆ ಉತ್ತರವನ್ನು ಬಯಸುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಈ ವಿಚಾರ ಈ ಪ್ರಶ್ನೆಯಲ್ಲಿರಲಿಲ್ಲವೆಂದು ನಾನು ಹೇಳಲಿಲ್ಲ. ಇದನ್ನು ತಾವು ಇವತ್ತು ನನ್ನ ಗಮನಕ್ಕೆ ತಂದಿದ್ದೀರಿ. ಕಾಗದಪತ್ರಗಳನ್ನು ತರಿಸಿ ಪರಿಶೀಲನೆ ಮಾಡುತ್ತೇನೆ. ಇದು ನನ್ನ ಕಕ್ಷೆಯಲ್ಲಿ ಬರುವಹಾಗೆ ಇದ್ದರೆ, ಕೂಡಲೇ ಲಾ ಡಿಪಾರ್ಟ್‌ಮೆಂಟ್‌ಗೆ ಬರೆದು ಯಾವ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವೋ ಆ ಕ್ರಮವನ್ನು ಅವರ ಮೇಲೆ ಜರುಗಿಸುತ್ತೇವೆ.

ಉಪಾಧ್ಯಕ್ಷಿಣಿಯವರು : ಈಗ ನಿಯಮ 334ರ ಮೇಲೆ ಬರುವ ವಿಷಯಗಳು. ಹನುಮಗೌಡ ಪಾಟೀಲ್‌ರವರು ಮಾತನಾಡಬಹುದು.

ಶ್ರೀ ಸಿ. ಭೈರೇಗೌಡ : ಅಧ್ಯಕ್ಷಿಣೀಯವರೇ, ನಾನು ಮಲ್ಪೆ ವಿಷಯದ ಬಗ್ಗೆ ಕಾಲಿಂಗ್ ಅಟೆನ್‌ಷನ್ ಕಳುಹಿಸಿದ್ದೆ. ಅದಕ್ಕೆ ಪಟ್ಟಿಯಲ್ಲಿ ಬರುತ್ತದೆ. ತಮಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದರು.

ಉಪಾಧ್ಯಕ್ಷಿಣಿಯವರು : ಇನ್ನೂ ಮೂರು ದಿವಸ ಸದನ ಇದೆ. ಯಾವತ್ತಾದರೂ ತೆಗೆದುಕೊಳ್ಳೋಣ.

ಶ್ರೀ ಸಿ. ಭೈರೇಗೌಡ : ಅದನ್ನು ಪಟ್ಟಿಯಲ್ಲಿ ಸೇರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ : ನಾನು ರಾಯಚೂರು ಜಿಲ್ಲೆಯ ಕೊಪ್ಪಳದ ಬಗ್ಗೆ ಒಂದು ಕಾಲಿಂಗ್ ಅಟೆನ್‌ಷನ್ ಕಳುಹಿಸಿದ್ದೆ. ಕಾಲಿಂಗ್ ಅಟೆನ್‌ಷನ್ ಬರದಿದ್ದರೂ ನೀವು ಇದನ್ನು ರೇಜ್ ಮಾಡಬಹುದು, ಇದನ್ನು ಕಂದಾಯ ಮಂತ್ರಿಗಳ ಗಮನಕ್ಕೆ ತರಬಹುದು ಎಂದು ಅನುಮತಿ ಕೊಟ್ಟಮೇಲೆ ನಾನು ಮಾತನಾಡುತ್ತಿರುವುದು.

ಉಪಾಧ್ಯಕ್ಷಿಣಿಯವರು : ನಿಮಯ 334ರ ಮೇಲೆ ಹಾಗೂ ಪೇಪರ್ಸ್ ಲೇ ಮಾಡುವುದರ ಬಗ್ಗೆ ಚರ್ಚೆಯಾದ ಮೇಲೆ ನೋಡೋಣ.

ಶ್ರೀ ಬಸವರಾಜ ರಾಯರೆಡ್ಡಿ : ಇದು ಬಹಳ ಪ್ರಾಮುಖ್ಯವಾದ ವಿಷಯ. ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಸಿಚ್ಯುಯೇಷನ್ ಕ್ರಿಯೇಟ್ ಆಗಿದೆ.

ಉಪಾಧ್ಯಕ್ಷಿಣಿಯವರು : ಈಗ ನಿಯಮ 334ರ ಮೇಲೆ ಚರ್ಚೆಯನ್ನು ಕರೆದಿದ್ದೇನೆ. ಮೊದಲು ಅದಾಗಲಿ. ಶ್ರೀ ಹನುಮಗೌಡ ಪಾಟೀಲ್. ಶ್ರೀಯುತ ಹನುಮೇಗೌಡ.

ನಿಯಮ 334ರ ಮೇರೆಗೆ

1) ಹಾಸನ ಕ್ಷೇತ್ರದ ಗವೇನಹಳ್ಳಿ ಮತ್ತು ಗೊರೂರು ಗ್ರಾಮಗಳಿಗೆ ಕುಡಿಯುವ ನೀರಿನ ಸರಬರಾಜು.

ಶ್ರೀ ಹೆಚ್. ಹನುಮೇಗೌಡ (ಹಾಸನ) : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಹಾಸನ ಕ್ಷೇತ್ರದ (1) ಗವೇನಹಳ್ಳಿ ಮತ್ತು (2) ಗೊರೂರು ಗ್ರಾಮಗಳಲ್ಲಿ ಕುಡಿಯುವ ನೀರಿಗೆ ತುಂಬಾ ತೊಂದರೆ ಇರುವ ವಿಚಾರವನ್ನು ಕಳೆದ ವರ್ಷ ಶಾಸನ ಸಭೆಯಲ್ಲಿ ಪ್ರಸ್ತಾಪಿಸಲಾಗಿ ಈ ಎರಡು ಗ್ರಾಮಗಳ ಕುಡಿಯುವ ನೀರಿನ ಯೋಜನೆಯನ್ನು ತಕ್ಷಣ ಅಭಿವೃದ್ಧಿಪಡಿಸಿ, ಈ ಎರಡು ಗ್ರಾಮಗಳ ಕುಡಿಯುವ ನೀರಿನ ತೊಂದರೆಯನ್ನು ಹೋಗಲಾಡಿಸುವುದಾಗಿ ಮಾನ್ಯ ಸಚಿವರು ಭರವಸೆ ನೀಡಿರುತ್ತಾರೆ. ಈ ಎರಡು ಗ್ರಾಮಗಳಿಗೆ ಪಿ.ಹೆಚ್.ಇ. ಮುಖ್ಯ ಇಂಜಿನಿಯರ್‌ರವರು ಸ್ಥಳ ಪರಿಶೀಲನೆ ಮಾಡಿ